2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 164/2022</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಹಮತ್ ಉಲ್ಲಾಖಾನ್ | ಪಿಡಬ್ಲೂ - 04 |
| ತಂದೆಯ ಹೆಸರು | - | ಹಯಾತ್ ಖಾನ್ | ಸಿಡಬ್ಲೂ - 02 |
| ವಯಸ್ಸು | - | 52 ವರ್ಷ | |
| ಉದ್ಯೋಗ | - | ವ್ಯಾಪಾರ | |
| ವಾಸ ಸ್ಥಳ | - | ತಂಗಳಿ ಗ್ರಾಮ, ಕಡೂರು ತಾಲ್ಲೂಕು | |

ದಿನಾಂಕಃ **23.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

<u>ಮುಖ್ಯ ವಿಚಾರಣೆ **:** ಸರ್ಕಾರಿ ಅಭಿಯೋಜಕರಿಂದ**-**</u>

1. ಆರೋಪಿತರು ಗೊತ್ತು. ಗಾಯಾಳು ಪರ್ಜಾನ ನನ್ನ ದೂರದ ಸಂಬಂಧಿ. ಚಾಸಾ.3 ರಿಂದ 5 ಮತ್ತು 7 ಗೊತ್ತು.

2. ಈಗ ತೋರಿಸಿದ ನಿಪಿ.6 ಮಹಜರಿನಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು.

3. ನಿಪಿ.6 ಕ್ಕೆ ನಾನು ಕಳೆದ ಐದು ವರ್ಷಗಳ ಹಿಂದೆ ಗಾಯಾಳು ಪರ್ಜಾನ ಇವರ ಗಂಡನ ಮನೆಯಲ್ಲಿ ಸಹಿ ಮಾಡಿದ್ದೇನೆ. ಚಾಸಾ.4 ರವರು ನನಗೆ ಅಲ್ಲಿ ಬರಲು ಹೇಳಿದ್ದರು. ಚಾಸಾ.3, 4 ಹಾಗೂ ಚಾಸಾ.4 ರವರ ಕಡೆಯವರು ಅಲ್ಲಿ ಹಾಜರಿದ್ದರು. ಕಡೂರು ಪೋಲೀಸರು ನನ್ನ ಸಹಿ ಪಡೆದಿದ್ದರು. ಗಂಡ ಹೆಂಡತಿಯ ಮದ್ಯೆ ಗಲಾಟೆಯಾದ ವಿಚಾರದಲ್ಲಿ ನನ್ನ ಸಹಿ ಪಡೆದಿದ್ದರು. ಆ ಸಮಯದಲ್ಲಿ ಸಂಗ್ರಹಿಸಿದ ಭಾವಚಿತ್ರಗಳನ್ನು ಈಗಾಗಲೇ ನಿಪಿ.4 ಮತ್ತು 5 ಎಂದು ಗುರುತಿಸಲಾಗಿದೆ. ನಿಪಿ.6 ಕ್ಕೆ ಚಾಸಾ.3 ಮತ್ತು 4 ರವರು ನನ್ನೊಂದಿಗ ಸಹಿ ಮಾಡಿದ್ದರು.

4. ಪೋಲೀಸರು ಎರಡು ಲೀಟರಿನ ಸಾಮರ್ಥ್ಯದ ಸೆವೆನಪ್ ಬಾಟಲಿಯಲ್ಲಿ ಸ್ವಲ್ಪ ಸೀಮೆಎಣ್ಣೆ ಇರುವುದನ್ನು ಮತ್ತು ಒಂದು ಬೆಂಕಿಪೊಟ್ಟಣವನ್ನು

ಪೋಲೀಸರು ಅಮಾನತು ಪಡಿಸಿಕೊಂಡರು. ಚಾಸಾ.4 ರವರು ಹಾಜರುಪಡಿಸಿ ಬಾಟಲಿ ಹಾಗೂ ಬೆಂಕಿಪೊಟ್ಟಣವನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 4 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ಮು.ಮಾ1(ಎ) ಮತ್ತು ಮು.ಮಾ.4(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಶ್ರೀ.ಕೆ.ಎಸ್.ಎಸ್.ಪಿ., ವಕೀಲರಿಂದ ಆರೋಪಿತರ ಪರವಾಗಿಃ</u>

5. ನಾನು ಗ್ರಾಮ ಪಂಚಾಯತಿಯ ಸದಸ್ಯನಲ್ಲ, ಗ್ರಾಮದ ಮುಖಂಡನಲ್ಲ. ಈ ಪ್ರಕರಣ ಹೊರತುಪಡಿಸಿ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುವುದಿಲ್ಲ. ಪೋಲೀಸರು ಮಹಜರು ಕಾಲದಲ್ಲಿ ಹಾಜರಿರುವಂತೆ ನನಗೆ ನೋಟೀಸು ನೀಡಿರಲಿಲ್ಲ. ನಿಪಿ.6 ರ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ.

6. ಚಾಸಾ.4 ರವರ ಕೋರಿಕೆ ಮೇರೆಗೆ ನಾನು ಸಹಿ ಮಾಡಿದ್ದೇನೆ. ನಿಪಿ.4 ರ ದಾಖಲೆ ಎಷ್ಟು ಪುಟಗಳಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಬರವಣಿಗೆ ಮಾಡಿದ್ದರೆ ಅಥವ ಬೆರಳಚ್ಚು ಮಾಡಿದ್ದರೆ ಎಂದು ಗೊತ್ತಿಲ್ಲ. ಗಲಾಟೆ ವಿಚಾರದಲ್ಲಿ ಸಹಿ ಪಡೆದಿದ್ದರು. ನನಗೆ ಗಲಾಟೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ನಿಜ.

7. ಪಂಚನಾಮೆ ಬರೆದ ಮನೆಯಲ್ಲಿ ಯಾವ ಯಾವ ವಸ್ತುಗಳು ಎಲ್ಲೆಲ್ಲಿ ಇದ್ದವು ಎಂದು ನನಗೆ ಹೇಳಲಾಗುವುದಿಲ್ಲ. ಚಾಸಾ.4 ರವರು ಸ್ಥಳ ತಲುಪಿನ 15 ನಿಮಿಷದ ನಂತರ ನಾನು ಸ್ಥಳಕ್ಕೆ ಹೋಗಿದ್ದೆ. ಚಾಸಾ.4 ರವರು ನನಗೆ ಪೋನು ಮಾಡಿ ಕರೆದಿದ್ದರು. ಚಾಸಾ.4 ರವರ ಪೋನು ನಂಬರನ್ನು ಪೋಲೀಸರಿಗೆ

ಕೊಟ್ಟಿಲ್ಲ. ಚಾಸಾ.4 ರವರ ಪೋನ್ ನಂಬರನ್ನು ಹೇಳಲಾಗುವುದಿಲ್ಲ. ಮು.ಮಾ.1 ಮತ್ತು 4 ನ್ನು ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ. ನಿಪಿ.4 ಮತ್ತು 5 ರ ಭಾವಚಿತ್ರವನ್ನು ತೆಗೆದ ಪೋಲೀಸರ ಹೆಸರನ್ನು ಹೇಳಲಾಗುವುದಿಲ್ಲ. ಪಂಚನಾಮೆ ಬರೆದ ಮನೆಯ ಡೋರ್ ನಂಬರನ್ನು ಹೇಳಲಾಗುವುದಿಲ್ಲ.

8. ಗಾಯಾಳು ಪರ್ಜಾನ ನನ್ನ ತಾಯಿಯ ಕಡೆಯಿಂದ ಸಂಬಂಧಿ. ನಾನು ಸಹಿ ಮಾಡಿದ ಜಾಗದಿಂದ ನಮ್ಮ ಮನೆ 4 ಕಿಮೀ ದೂರ ಇದೆ. ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ರವರು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮು.ಮಾ.1 ಮತ್ತು 4 ನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ